ಹಾಳುಬಾವಿಯೊಳಗಿದ್ದಂತೆ ಕಂಡವು. ಅವು ದಟ್ಟ ಹಳದಿ ಬಣ್ಣದ ಉಂಡೆಯಂತೆ ಕಾಣುತ್ತಿದ್ದವು. ದೇಹ ಕೃಶಗೊಂಡಿತ್ತು.

'ಅಮ್ಮ ಅಕ್ಕ, ನಾ ಇದರಿಂದ ಆರಾಮ ಆಗತೇನಿ? ನಾ ಸತ್ತ ಹೋಗೋದಿಲ್ಲ ಹೌಂದಲ್ಲ?' ಸವಿತಾಳ ಮಾತಿಗೆ ಅಮೃತಾಳ ಕರುಳು ಹರಿದು ಹೋಗಿತ್ತು. ತಂಗಿಯ ಮಾತು ಕೇಳಿ ಕಣ್ಣು ತೇವಗೊಂಡಿತು. ತಕ್ಷಣ ಉತ್ತರ ಹೊಳೆಯಲಿಲ್ಲ. ಸಾವರಿಸಿಕೊಂಡಳು.

'ಚುಪ್! ಹಂಗೆಲ್ಲ ಮಾತಾಡಬಾರದು... ಇನ್ನೂ ಹರೇದ ಪೋರಿ ಅದೀ ನೀ! ನಿನಗ್ಯಾನ ಆಕ್ಕೇತಿ? ನಾಳೇನ ನಾನು ಅಲ್ಲಿರತೇನ... ಕಾಳಜಿ ಮಾಡಬ್ಯಾಡ..." ಎಂದು ತಂಗಿಗೆ ಧೈರ್ಯ ಸ್ಥೈರ್ಯ ತುಂಬಿದಳು. ಆಫೀಸ್‌ನಲ್ಲಿ ತಂಗಿಯ ಮೆಡಿಕಲ್ ಕಾರಣಗಳನ್ನು ಹೇಳಿ ಮನವರಿಕೆ ಮಾಡಿದಳು. ಅಮೃತಾ ವರ್ಕ್ ಫ್ರಮ್ ಹೋಮ್ ಕಾರ್ಯವೆಂದು ಒಪ್ಪಿಗೆ ಪಡೆದುಕೊಂಡು ಬಂದೇ ಬಿಟ್ಟಳು. ಸವಿತಾಳ ವೈದ್ಯಕೀಯ ಉಪಚಾರದ ಸಕಲ ಹೊಣೆಗಾರಿಕೆಯನ್ನು ವಹಿಸಿಕೊಂಡಳು. ದೈವದ ಸೇವೆಗೆ ರಾಮಗೊಂಡ ಮತ್ತು ಸುನೀತಾ ಊರು ಸೇರಿದರು.

ಹಾಗೆ ಅಮೃತಾ ಧೈರ್ಯವಂತ ಮತ್ತು ಜೀವನೋತ್ಸಾಹದ ಹುಡುಗಿ. ತಂದೆ ತಾಯಂದಿರಿಗೆ ಹುರುಪು ನೀಡುವ ಹಿರಿತನದ ಗುಣವು ಅವಳಜ್ಜಿಯಿಂದಲೇ ಬಂದಿದೆ. ತಂದೆ ರಾಮಗೊಂಡನೇ ಮಕ್ಕಳ ವಿಷಯದಲ್ಲಿ ಸ್ವಲ್ಪ ಭಾವುಕ ಮತ್ತು ಪುಕ್ಕಲ. ಮಕ್ಕಳಿಗೇನಾದರೂ ಆಗಿಬಿಟ್ಟರೆ? ಹೀಗೆ ಬೆದರಿ ಬೆಂಡಾಗಿ ಒದ್ದಾಡುತ್ತಾನೆ. ಅಮೃತಾಳ ಆಗಮನದಿಂದ ರಾಮಗೊಂಡ ಮತ್ತು ಸುನೀತಾರಿಗೆ ಆತ್ಮಿಕ ಬಲ ಸಿಕ್ಕಿತು.

ಡಾ.ಸಾಖರೆ ಕಳಿಸಿದ ತಪಾಸಣೆಯ ವರದಿಗಳೆಲ್ಲವೂ ಬಂದವು ಮತ್ತು ಅವು ಉತ್ತಮವಾಗಿದ್ದವು. ಎಲ್ಲರು ಒಂದು ನೆಮ್ಮದಿಯ ನಿಟ್ಟುಸಿರು ಚೆಲ್ಲಿದರು. ಆದ್ದರಿಂದ ಸಾಖರೆ ಚಿಕಿತ್ಸೆಯನ್ನು ಮುಂದುವರಿಸಿದ್ದ. ಅವರಿಗೆ ತಾನೇ ಈ ರೋಗವನ್ನು ಹತೋಟಿಗೆ ತರುವೆನೆಂಬ ಹಟವಿದ್ದಂತಿತ್ತು. ಕಾಲವು ಓಡುತ್ತಿತ್ತು. ಈ ಮಧ್ಯೆ ಒಮ್ಮೆ ರಾಮಗೊಂಡ ಸ್ಪಷ್ಟವಾಗಿ ಡಾ.ಸಾಖರೆಗೆ ಹೇಳಿದ್ದ.

'ಡಾಕ್ಟರ್, ನಿಮ್ಮಿಂದ ಗುಣಪಡಿಸುವುದು ಕಷ್ಟವಿದ್ದರ ಹೇಳಿರಿ. ಬೇರೆ ಸ್ಪೆಷಲಿಸ್ಟ್ ಕಡೆಗೆ ಮಗಳನ್ನು ಕರೆಕೊಂಡ ಹೋಗ್ತೇನಿ...' ಎಂದು.

ಆದರೆ ಅವರು, 'ಅದರ ಅಗತ್ಯವಿಲ್ಲ... ತಾನು ತಜ್ಞರ ಸಂಗಡ ನಿರಂತರ ಸಂಪರ್ಕ ಇಟ್ಟುಕೊಂಡೇ ಚಿಕಿತ್ಸೆ ನೀಡುತಿದೀನಿ...' ಎಂಬ ಭರವಸೆಯ ನುಡಿಗಳನ್ನಾಡಿದ್ದರು. ಹಾಗೆ ಆಡುತ್ತಾ ಬಂದಿದ್ದರು ಸಹ. ಸಾಖರೆಯ ಈ ನಂಬಿಕೆಯ ಮಾತು ರಾಮಗೊಂಡನಿಗೆ ಊರಿಗೆ ಹೋಗುವ ಧೈರ್ಯವನ್ನು ನೀಡಿತ್ತು. ದಿನನಿತ್ಯ ಆಸ್ಪತ್ರೆಗೆ ಹೋಗಿ ಸಲೈನ್ ಮೂಲಕ ಔಷಧಿ ಪಡೆದು ಮನೆಯಲ್ಲಿ ವಿಶ್ರಾಂತಿ ಪಡೆಯುವುದು ಸಾಗಿತ್ತು. ಆದರೆ ಫಲಶ್ರುತಿ ಮಾತ್ರ ಬೋರ್ಗಲ್ಲ ಮೇಲೆ ಮಳೆ ಸುರಿದಂತೆ! ನಗಣ್ಯವಷ್ಟೇ ಅಲ್ಲ, ಅಪಾಯದ ಕಡೆಗೆ ಕೊಂಡೊಯ್ಯುತ್ತಿದೆ ಏನೋ ಎಂಬ ಅನುಮಾನವು ಮುಳ್ಳು ಮೊನೆಯಾಗಿ ಉಳುಕಾಡುತ್ತಿತ್ತು. ಸಾಖರೆ ಮೇಲೆ ನಂಬಿಕೆ ಹಾಗು ಒಂದು ಬದುಕಿನ ಹೊಸ ಭರವಸೆ ರಾಮಗೊಂಡ ಮತ್ತು ಸುನೀತಾರಲ್ಲಿ ಕ್ರಮೇಣ ಕರಗುತ್ತಲಿತ್ತು. ಅಮೃತಾಳಿಗೆ ಚಿಕಿತ್ಸೆ ಶುಶ್ರೂಷೆಯ ಭಾರ ಹೊರೆಸಿ ಊರ ಕಡೆಗೆ ದೈವದ ಕಾರ್ಯಗಳಿಗೆ ಮುಖ ಮಾಡಿ ಆಗಿತ್ತು. ಆದರೆ ದಿನನಿತ್ಯದ ಕಾಳಜಿ ತಪ್ಪಿದ್ದಿಲ್ಲ. ಹಲವು ಬಾರಿ ಫೋನ್ ಮೂಲಕ ವಿಚಾರಿಸುತ್ತಿದ್ದರು.

ದೈವದ ಮೂರು ಕಾಲದ ಅರ್ಚನೆ. ಅದರಲ್ಲಿ ಅವನ ನೆರವಿಗೆ ಬಂಧುಗಳಿದ್ದರು. ರಾತ್ರಿಯ ಚಾಕರಿ ಎಂಬ ಸೇವೆಯು ರಾಮಗೊಂಡನ ಪಾಲಿಗಿತ್ತು. ಗರ್ಭ ಗುಡಿ ಬೆಚ್ಚಗಿತ್ತು. ಅದರ ಬಾಗಿಲು ಹಾಕಿರುತ್ತಿತ್ತು. ಸುತ್ತಲೂ ಸುಂದು ಹೊಡೆದು ಬಿದ್ದ ಕುಂಭಕರ್ಣ ಪ್ರಶಾಂತತೆ. ಪರದೆ ಹಾಕಿಯೆ ದೈವದ ಚಾಕರಿ ಮಾಡುವುದು ಪರಂಪರಾಗತ ರೂಪದಲ್ಲಿ ಬಂದ ಪದ್ಧತಿ. ಮುಕ್ಕಾಲು ಗಂಟೆ ಅವಧಿಯ ಚಾಕರಿ ಸೇವೆ ಮಾಡುವವನ ಬೆವರಿನ ಜಳಕವೇ ಸರಿ. ಊರು ಕಾಪಾಡುವ ದೈವವು ಇರುಳಲ್ಲಿ ಊರು ಸುತ್ತಿ ಕಾದು ದಣಿದು ಬಂದಿರುತ್ತದೆಂಬ ನಂಬಿಕೆ. ಹಾಗಾಗಿ ಚಾಕರಿ. ಮೌನವಾಗಿ ದೈವದ ಮೈ ಒತ್ತಿ ದಣಿವಾರಿಸುವುದು. ಹೀಗೆ ಚಾಕರಿ ಮಾಡುವಾಗ ರಾಮಗೊಂಡ ದೈವನಲ್ಲಿ ಪರಿ ಪರಿ ಬೇಡಿಕೊಂಡ. 'ನಿನ್ನ ಮೈಮೇಲೆ ರಕ್ತ ಬಸಿದು ಬೀಳುವ ಬೆವರ